

ಪ್ರಸ್ತಾಪವನ್ನು ಅಪ್ಪನ ಬಳಿ ಇಟ್ಟಾಗ, ಇಬ್ಬರ ನಡುವೆ ಇಪ್ಪತ್ತೊಂದು ವರ್ಷ ವಯಸ್ಸಿನ ಅಂತರವಿದೆ ಎಂಬ ಕಾರಣಕ್ಕೆ ಅಪ್ಪ ಮದುವೆಗೆ ಒಪ್ಪಿರಲಿಲ್ಲ. ಆದರೆ ನಂತರ ಬಂದ ಎಲ್ಲ ಪ್ರಸ್ತಾಪಗಳಲ್ಲೂ, ಮದುವೆಯಾದ ಬಳಿಕ ನೃತ್ಯ ಮುಂದುವರೆಸಲು ಅವಕಾಶವಿಲ್ಲ ಎಂಬ ಮಾತೇ ಕೇಳಿಬರುತ್ತಿತ್ತು. ಹಾಗಾಗಿ ಮತ್ತೆ ದೊರೆಸ್ವಾಮಿ ಅವರ ಪ್ರಸ್ತಾಪವನ್ನೇ ಅಪ್ಪ ಅಂಗೀಕರಿಸಿದರು. ಸಂಪ್ರದಾಯಸ್ಥ ಕುಟುಂಬವಾದ್ದರಿಂದ ಇಬ್ಬರ ಜಾತಕ ಹೊಂದಾಣಿಕೆಯನ್ನು ನೋಡಿ, ಮದುವೆಗೆ ಅನುಮತಿ ನೀಡಲಾಯಿತು ಎನ್ನಿ. ಈ ಎಲ್ಲ ಪ್ರಕ್ರಿಯೆಗಳಿಗೆ ಮುನ್ನ, ನಾನು ದೊರೆಸ್ವಾಮಿ ಅವರನ್ನು ‘ಮೈಸೂರು ಮಾಮ’ ಎಂದು ಕರೆಯುತ್ತಿದ್ದೆ. ಅವರೇ ನನ್ನ ಪತಿಯಾಗಿ, ನನ್ನ ಜೀವನದುದ್ದಕ್ಕೂ ನೃತ್ಯಕ್ಕೆ ಇನ್ನಿಲ್ಲದಂತೆ ಪ್ರೋತ್ಸಾಹಿಸಿದರು.

◆ **ನಂತರವೂ ನೀವು ನೃತ್ಯವನ್ನು ಚಂದಗಾಣಿಸಲು ಕಲಿಕೆಯನ್ನು ಮುಂದುವರೆಸಿದಿರಾ?**

ಸಾಂಸಾರಿಕ ಜೀವನ ಸಾಗುತ್ತಿದ್ದಂತೆಯೇ ನನ್ನ ನೃತ್ಯ ಕಲಿಕೆಯು ವಿವಿಧ ಆಯಾಮಗಳಲ್ಲಿ ಮುಂದುವರೆಯಿತು. ಮೈಸೂರು ವಿಶ್ವವಿದ್ಯಾಲಯದಲ್ಲಿ ಜಾನಪದ ಅಧ್ಯಯನ ವಿಷಯವಾಗಿ ಎಂ.ಎ. ಪದವಿ ಪಡೆದೆ. ಯೋಗ ಗುರು ಪಟ್ಟಾಭಿ ಜೋಯಿಸರಲ್ಲಿ ಅಷ್ಟಾಂಗ ಯೋಗ ಕಲಿಯಲು ಆರಂಭಿಸಿದೆ. ಇದೇ ಸಂದರ್ಭದಲ್ಲಿ ನನಗೆ ಯೋಗ ಮತ್ತು ನೃತ್ಯದ ನಡುವೆ ಯಾವುದೋ ಒಂದು ಬಂಧ ಇರುವುದು ಮನಸ್ಸಿಗೆ ಹೊಳೆಯಿತು. ‘ಯೋಗ ಹಾಗೂ ಭರತನಾಟ್ಯ ಸಮನ್ವಯ’ ಎಂಬ ವಿಷಯದ ಕುರಿತಾಗಿ ಇಂಟರ್‌ನ್ಯಾಷನಲ್ ಕಲ್ಚರಲ್ ಕರೆಸ್ಪಾಂಡೆನ್ಸ್ ಇನ್‌ಸ್ಟಿಟ್ಯೂಟ್‌ಗೆ ಮಹಾಪ್ರಬಂಧ ಸಲ್ಲಿಸಿ 1986ರಲ್ಲಿ ಪಿಎಚ್‌.ಡಿ ಪಡೆದೆ. ನನ್ನ ಈ ಕಲಿಕೆಯ ಅಂಶಗಳನ್ನು ಉಲ್ಲೇಖಿಸಿ ‘ನಾಟ್ಯಯೋಗ ದರ್ಶನ’ ಎಂಬ ಪುಸ್ತಕವನ್ನೂ ಪ್ರಕಟಿಸಿದೆ.

ಅಷ್ಟೇ ಅಲ್ಲ, ಭರತನಾಟ್ಯದಲ್ಲಿ ಈ ಯೋಗ ಭಂಗಿಗಳನ್ನು ಔಚಿತ್ಯಪೂರ್ಣವಾಗಿ ಅಳವಡಿಸಲು